MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 2-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಬಿಹಾರದಲ್ಲಿ ಜೋಳ ದರ ಇಳಿಕೆ

ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ಸಗಟು ಖರೀದಿದಾರರಿಂದ ಬೇಡಿಕೆ ಇಳಿಕೆ ಹಾಗೂ ಕಳಪೆ ದರ್ಜೆಯ ಜೋಳ ಆವಕದಿಂದ ದರ ಇಳಿಕೆಯಾಗಿದೆ. ಹೆಚ್ಚಿನ ಅಕಾಲಿಕ ಮಳೆಯಿಂದ ಹೆಚ್ಚಿನ ಬೆಳೆ ಹಾನಿಗೊಂಡಿದೆಯೆನ್ನಲಾಗಿದೆ. ಕರ್ನಾಟಕದಲ್ಲಿ ದರ ಸ್ಥಿರವಾಗಿದೆ. ಕೆ.ಎಫ್.ಎಲ್ ಕೇರಳ ಫೀಡ್ಸ್ ಲಿಮಿಟೆಡ್ ಪಾಲಕ್ಕಾಡ್ ಜಿಲ್ಲೆಯ ಮುತ್ತಲಮಾಡ ಎಂಬಲ್ಲಿ ಪಶುಆಹಾರ ತಯಾರಿಕೆಗಾಗಿ ಜೋಳ ಬೆಳೆಯಲು ಯೋಜಿಸಿದ್ದು, ಯೋಜನೆಯನ್ನು ಉದ್ಘಾಟಿಸಿದೆ. IIMR(ಭಾರತೀಯ ಜೋಳ ಸಂಶೋಧನಾ ಸಂಸ್ಥೆ) ಯ ತಾಂತ್ರಿಕ ಸಹಾಯದೊಂದಿಗೆ ಡೈರಿ ಫಾರ್ಮರ್‌ಗಳಿಗೆ ಸಹಾಯಕವಾಗಲು, ಯೋಜನೆಯನ್ನು ಆರಂಭಿಸಲಾಗಿದೆಯೆನ್ನಲಾಗಿದೆ.

## ಜಾಗತಿಕ ಸೋಯಾಬೀನ್ ಉತ್ಪಾದನೆ 13 ಶೇಕಡಾ ಹೆಚ್ಚಳ ಅಂದಾಜು

USDA ಪ್ರಥಮ ಅಂದಾಜಿನಂತೆ ಹೊಸ ಬೆಳೆಯ ಜಾಗತಿಕ ಸೋಯಾಬೀನ್ ಉತ್ಪಾದನೆ 2021/22 ಕ್ಕೆ ಹೋಲಿಸಿದಾಗ 13 ಶೇಕಡಾ ಹೆಚ್ಚಳದೊಂದಿಗೆ 394.7 MT ಆಗಬಹುದೆಂದು ಅಂದಾಜಿಸಿದೆಯೆನ್ನಲಾಗಿದೆ. 2021-22 ರಲ್ಲಿ 349 MT ಉತ್ಪಾದನೆಯಾಗಿತ್ತೆನ್ನಲಾಗಿದೆ. ಬ್ರೆಜಿಲ್‌ನ ಉತ್ಪಾದನೆ ಹಿಂದಿನ ವರ್ಷ 125 MT ಯಿಂದ 19 ಶೇಕಡಾ ಹೆಚ್ಚಳದೊಂದಿಗೆ 149 MT ಆಗಬಹುದೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ. ಅಮೇರಿಕಾ ಉತ್ಪಾದನೆ 4.6 ಶೇಕಡಾ ಹೆಚ್ಚಳ ಕಾಣಲಿದ್ದು 120.7 MT ಯಿಂದ 126.3 MT ಗೇರಲಿದೆಯೆನ್ನಲಾಗಿದೆ. ಅರ್ಜೆಂಟಿನಾದ ಉತ್ಪಾದನೆ 21.4 ಶೇಕಡಾ ಹೆಚ್ಚಳದೊಂದಿಗೆ 51 MT ಯಾಗಲಿದೆಯೆನ್ನಲಾಗಿದೆ.

## 2022-23 ರ ಜಾಗತಿಕ ಸಸ್ಯಜನ್ಯ ತೈಲ ಉತ್ಪಾದನೆ 3 ಶೇಕಡಾ ಹೆಚ್ಚಳ

ಸೋಯಾಬೀನ್ ಎಣ್ಣೆ, ಸಾಸಿವೆ ಎಣ್ಣೆ, ಪಾಮೆಣ್ಣೆಗಳ ಉತ್ಪಾದನೆ ಹೆಚ್ಚಳದೊಂದಿಗೆ 2022-23 ರಲ್ಲಿ ಒಟ್ಟು ಜಾಗತಿಕ ಸಸ್ಯಜನ್ಯ ಖಾದ್ಯತೈಲ ಉತ್ಪಾದನೆ 3 ಶೇಕಡಾ ಹೆಚ್ಚಳವಾಗುವ ಅಂದಾಜು ಮಾಡಲಾಗಿದೆ. ಹಾಗೆಯೇ ವರ್ಷಾಂತ್ಯದ ದಾಸ್ತಾನು (ಜಾಗತಿಕ) 4 ಶೇಕಡಾ ಹೆಚ್ಚಳವಾಗಿ 28 ಮಿಲಿಯನ್ ಟನ್‌ಗಳಾಗಲಿದೆಯೆನ್ನಲಾಗಿದೆ. ಹಾಗೂ ಇದರಲ್ಲಿ 16.53 ಮಿಲಿಯನ್ ಟನ್‌ಗಳು ಪಾಮೆಣ್ಣೆಯಾಗಿರಲಿದೆಯೆನ್ನಲಾಗಿದೆ. ಮಲೇಶ್ಯಾದ ಪಾಮೆಣ್ಣೆ ಕೌನ್ಸಿಲ್ 2022 ರ ಮಲೇಶಯನ್ ಪಾಮೆಣ್ಣೆ ಉತ್ಪಾದನೆ 18.6 ಮಿಲಿಯನ್ ಟನ್‌ಗಳಾಗಬಹುದೆಂದು ಅಂದಾಜಿಸಿದೆ(ಇಳಿಕೆಯಾಗಿದೆ) ಉತ್ಪಾದನೆ ಇಳಿಕೆಯಾಗುವ ನಿರೀಕ್ಷೆಯಿಂದ ಮಲೇಶಿಯನ್ ಪಾಮೆಣ್ಣೆ ದರ ಅಲ್ಪ ಪ್ರಮಾಣದ ಹೆಚ್ಚಳ ದಾಖಲಿಸಿದರೂ, ಇಂಡೋನೇಶಿಯಾದ ರಫ್ತು ಪುನರಾಂಭದಿಂದ ಹೆಚ್ಚಳಕ್ಕೆ ತಡೆಯಾಗಿದೆ.

## ಈ ವರ್ಷ ಗೋಡಂಬಿ ತಿರುಳು ದೇಶೀ ಬಳಕೆ ಹೆಚ್ಚಳ ಸಾಧ್ಯತೆ

ಹಿಂದಿನೆರಡು ವರ್ಷಗಳಲ್ಲಿ ಕೋವಿಡ್ ನಿರ್ಬಂಧಗಳಿಂದ ಸಮಾರಂಭ, ಹೋಟೆಲ್, ಸಿಹಿತಿಂಡಿ, ಬೇಕರಿ ಮುಂತಾದವುಗಳಿಂದ ಬೇಡಿಕೆ ಇಳಿಕೆಯಾಗಿ ಬಳಕೆಯೂ ಇಳಿಕೆಯಾಗಿತ್ತು. ಈಗ ನಿರ್ಬಂಧ ಸಡಿಲಗೊಂಡು ಚಟುವಟಿಕೆ ಹೆಚ್ಚಳಗೊಂಡಿರುವುದರಿಂದ ಆಹಾರ ಉತ್ಪಾದನಾ ವಲಯ, ಹೋಟೆಲ್, ಬೇಕರಿ, ಸಮಾರಂಭ, ಹಬ್ಬಗಳಿಗೆ ಗೋಡಂಬಿ ತಿರುಳಿನ ಬೇಡಿಕೆ ಹೆಚ್ಚಳವಾಗಬಹುದು. ಇದರಿಂದ ಈ ವರ್ಷ ಗೋಡಂಬಿ ತಿರುಳಿಗೆ ದೇಶೀ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಯಿದೆ. ದೇಶೀ ಕಚ್ಚಾಗೋಡಂಬಿ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದ್ದು, ಕೈಗಾರಿಕೆಗಳಿಗೆ ಆಮದು ಕಚ್ಚಾ ಗೋಡಂಬಿಯ ಅವಲಂಬನೆ ಹೆಚ್ಚಳವಾಗುವ ಸಾಧ್ಯತೆಯಿದೆ. ಗೋಡಂಬಿ ತಿರುಳಿನ ದಾಸ್ತಾನು ಇಳಿಕೆಯಾದಾಗ ಹಾಗೂ ಬೇಡಿಕೆ ಹೆಚ್ಚಳವಾದಲ್ಲಿ ಮುಂಬರುವ ತಿಂಗಳುಗಳಲ್ಲಿ ಗೋಡಂಬಿ ತಿರುಳು ದರ ಹೆಚ್ಚಳವಾಗುವ ಸಾಧ್ಯತೆಯಿದೆ.

## ಜೋಳದ ಉತ್ಪಾದನೆ ದೇಶದಲ್ಲಿ ಹಿಂದಿನ 10 ವರ್ಷಗಳಲ್ಲಿ 50 ಶೇಕಡಾ ಹೆಚ್ಚಳವಾದರೂ ರಫ್ತು ಪ್ರಮಾಣ ಹೆಚ್ಚಳವಾಗಿಲ್ಲ

ದೇಶದ ಜೋಳದ ಉತ್ಪಾದನೆ 2012-13 ರಲ್ಲಿ 22.26 ಮಿಲಿಯನ್ ಟನ್‌ಗಳ ಉತ್ಪಾದನೆ 2021-22 ರಲ್ಲಿ 33.18 ಮಿಲಿಯನ್ ಟನ್‌ಗಳಿಗೇರಿದರೂ, ರಫ್ತು ಮಾತ್ರ 2012-13 ರಲ್ಲಿದ್ದುದರಿಂದ ಕಡಿಮೆ ಪ್ರಮಾಣದಲ್ಲಿದೆಯೆನ್ನಲಾಗಿದೆ. ಹೆಕ್ಟೇರುವಾರು ಜಾಗತಿಕ ಉತ್ಪಾದನೆ ಸರಾಸರಿ 5.6 ಟನ್‌ಗಳಾದರೆ, ಭಾರತದಲ್ಲಿ 2.6 ಟನ್‌ಗಳಾಗಿದೆ. ಹಾಗೂ ಅಮೇರಿಕಾದಲ್ಲಿ (ಯು.ಎಸ್) 10.7 ಟನ್‌ಗಳಾಗಿವೆ. ಭಾರತ ದೇಶದಲ್ಲಿ ಅಕ್ಕಿ, ಗೋಧಿಯ ನಂತರ 3ನೇ ಹೆಚ್ಚು ಉತ್ಪಾದಿಸಲ್ಪಡುವ ಧಾನ್ಯ ಜೋಳವಾಗಿದೆ. ಭಾರತದಲ್ಲಿ ಪ್ರಮುಖವಾಗಿ ಕರ್ನಾಟಕ, ರಾಜಸ್ಥಾನ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲಿ ಸುಮಾರು ಭಾರತದ ಜೋಳ ಕೃಷಿ ಪ್ರದೇಶದ ಅರ್ಧಾಂಶ ಪ್ರದೇಶ ಒಳಗೊಂಡಿದೆ. ಕರ್ನಾಟಕ, ರಾಜಸ್ಥಾನ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಬಿಹಾರಗಳಲ್ಲಿ ಸೇರಿ ಭಾರತದ ಜೋಳ ಉತ್ಪಾದನೆ ಮೂರನೆ ಎರಡಂಶ ಜೋಳ ಉತ್ಪಾದಿಸಲಾಗುತ್ತಿದೆ.